
# ಲೇಖನಗಳ ಸಂಕಲನ 'ಮಾತೆಯ ಮಡಿಲು'

ಶ್ರೀಮಾತೆಯವರನ್ನು ಕುರಿತು ಸ್ವಾಮಿ ಬ್ರಹ್ಮೇಶಾನಂದರು ಬರೆದ ವಿವಿಧ ಲೇಖನಗಳನ್ನು ಅನುವಾದಿಸಿ ಪ್ರಕಟಿಸಿದ ಕೃತಿಯೇ **'ಮಾತೆಯ ಮಡಿಲು'**. ಮಾತಾ ತ್ಯಾಗಮಯಿಯವರು ಅನುವಾದಿಸಿದ ಈ ಲೇಖನಗಳನ್ನು ಇಂಗ್ಲಿಷ್ ಹಾಗೂ ಹಿಂದೀ ಮೂಲ ಗ್ರಂಥಗಳಿಂದ ಆರಿಸಲಾಗಿದೆ. ಮೊದಲಿಗೆ 'ಎರಡು ಮಾತು'ಗಳಲ್ಲಿ ಅನುವಾದಕಿ ಹೇಳುತ್ತಾರೆ: ''ಈ ಕೃತಿಯಲ್ಲಿ ಶ್ರೀರಾಮಕೃಷ್ಣ ಮಠ, ಚೆನ್ನೈಯಿಂದ ಪ್ರಕಟವಾದ 'The Motherhood of God' ಗ್ರಂಥದಲ್ಲಿನ ಎಲ್ಲ ಲೇಖನಗಳನ್ನು ತೆಗೆದುಕೊಳ್ಳಲಾಗಿದೆ.. ಕೆಲವು ಲೇಖನಗಳನ್ನು ಶ್ರೀರಾಮಕೃಷ್ಣ ಮಠ, ನಾಗಪುರದಿಂದ ಪ್ರಕಟವಾದ 'ಮಾತೃದರ್ಶನ' ಎಂಬ ಕೃತಿಯಿಂದ ಆಯ್ಕೆ ಮಾಡಿದ್ದೇವೆ. ಕೆಲವು ಲೇಖನಗಳನ್ನು ವೇದಾಂತ ಕೇಸರಿ, ಪ್ರಬುದ್ಧ ಭಾರತ, ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನ ಬುಲೆಟಿನ್‌ನಿಂದ ಆಯ್ದುಕೊಂಡಿದ್ದೇವೆ.'' ಈ ಎಲ್ಲ ಲೇಖನಗಳನ್ನು ಒಟ್ಟು ಮೂರು ಭಾಗಗಳಲ್ಲಿ ಸಂಗ್ರಹಿಸಲಾಗಿದೆ. **'ಭಗವಂತನ ಮಾತೃತ್ವ'** ಎಂಬ ಮೊದಲ ಭಾಗದಲ್ಲಿ ಆರು ಲೇಖನಗಳಿವೆ. ಭಗವಂತನ ಮಾತೃತ್ವ, ಮಾತೃತ್ವದ ಆದರ್ಶ, ಶ್ರೀರಾಮಕೃಷ್ಣರು ಮತ್ತು ಭಗವಂತನ ಮಾತೃತ್ವ, ಶ್ರೀಶಾರದಾದೇವಿ ಮತ್ತು ಭಗವಂತನ ಮಾತೃತ್ವ, ಸ್ವಾಮಿ ವಿವೇಕಾನಂದರು ಮತ್ತು ದೇವೀಭಕ್ತಿ, ಶ್ರೀರಾಮಕೃಷ್ಣರ ಮೂರು ರೂಪಗಳು — ಎಂಬ ಈ ಲೇಖನಗಳಲ್ಲಿ ಶ್ರೀಮಾತೆ ಯವರ ಜೀವನ, ಉಪದೇಶಗಳ ವಿವರಗಳೊಂದಿಗೆ ಮಾತೃತ್ವದ ತತ್ತ್ವ, ಆದರ್ಶ ಗಳೇನು ಹಾಗೂ ಅವು ಶ್ರೀಮಾತೆಯವರಲ್ಲಿ ಮೂಡಿಬಂದ ಬಗೆ ಹೇಗೆ ಎಂಬುದನ್ನು ವಿವರಿಸಲಾಗಿದೆ.




ಕೃತಿ: ಮಾತೆಯ ಮಡಿಲು
ಲೇಖಕರು : ಸ್ವಾಮಿ ಬ್ರಹ್ಮೇಶಾನಂದ
ಪ್ರಕಾಶನ : ವಿವೇಕಹಂಸ ಪ್ರಕಾಶನ
ಬೆಂಗಳೂರು - 560 050
ಫೋ: + 91 80 26696388, 26791827, 40990196
ಪುಟ: 180 ಬೆಲೆ : 120

ಎರಡನೆಯ ಭಾಗ **'ಶ್ರೀಶಾರದಾದೇವೀ ಮಾಹಾತ್ಮ್ಯ'** ಎಂಬುದು. ಇದರಲ್ಲಿ ಏಳು ಲೇಖನಗಳಿವೆ. 'ಲಜ್ಜಾಪಟಾವೃತೆ', 'ಶ್ರೀಮಾತೆಯವರ ಆಧ್ಯಾತ್ಮಿಕ ಸಾಧನೆ ಗಳು', 'ಪವಿತ್ರತಾ ಸ್ವರೂಪಿಣಿ', 'ಯಥಾಗ್ನೇರ್ದಾಹಿಕಾಶಕ್ತಿಃ', 'ಶ್ರೀಮಾತೆಯವರ ಮಾಹಾತ್ಮ್ಯ', 'ಶ್ರೀಮಾತೆಯವರ ವೈಶಿಷ್ಟ್ಯ', 'ಅಂತರ್ಯಾಮಿ ತಾಯಿ' — ಈ ಶೀರ್ಷಿಕೆಯ ಈ ಲೇಖನಗಳಲ್ಲಿ ಶ್ರೀಮಾತೆಯವರ ವ್ಯಕ್ತಿತ್ವದ ವಿವಿಧ ಗುಣಗಳನ್ನು, ಅವುಗಳ ವಿಭಿನ್ನ ಆಯಾಮಗಳನ್ನು ವಿವರಿಸಲಾಗಿದೆ. ಗ್ರಂಥದ ಬಹುಪಾಲನ್ನು ಈ ಭಾಗವೇ ಆವರಿಸಿಕೊಂಡಿದೆ; ಇಲ್ಲಿನ ಲೇಖನಗಳೂ ದೀರ್ಘವಾಗಿವೆ. ಜೀವನ ಚರಿತ್ರೆಯ ಗ್ರಂಥಗಳಲ್ಲಿ ಬಂದ ಹತ್ತುಹಲವು ಘಟನೆಗಳಿಗೂ, ಅಲ್ಲಿನ ಜೀವನ-ಉಪದೇಶಗಳ ವಿಚಾರಗಳಿಗೂ ಹೊರತಾಗಿ ಇಲ್ಲಿ ಹೆಚ್ಚಿನ ಯಾವ ಅಂಶಗಳು ಅಡಕ ವಾಗಿವೆ? ಇಲ್ಲಿನ ಶೀರ್ಷಿಕೆಗಳೇ ಸೂಚಿಸುವಂತೆ ಶ್ರೀಮಾತೆಯವರ ವ್ಯಕ್ತಿತ್ವದ ಗುಣ ಗಳಿಗೆ ಇಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಮಾಹಿತಿ, ವಿವರಣೆಗಳಿಗಿಂತ ಅವರ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಕಂಡುಕೊಳ್ಳುವುದೇ ಇಲ್ಲಿ ಮಹತ್ವದ್ದಾಗಿದೆ.

ಮೂರನೆಯ ಭಾಗವೇ **'ಶ್ರೀಮಾತೆಯವರ ಸಂದೇಶ'**. ಇದರಲ್ಲಿ ಐದು ಲೇಖನ ಗಳಿವೆ: 'ಸುಜ್ಞಾನದಾಯಿಕೆ', 'ಶ್ರೀಮಾತೆಯವರ ದೃಷ್ಟಿಯಲ್ಲಿ ಆನಂದಪ್ರಾಪ್ತಿಯ ಉಪಾಯಗಳು', 'ಶ್ರೀಮಾತೆಯವರು ಮತ್ತು ಸ್ತ್ರೀ ಸಬಲೀಕರಣ', 'ಭಾರತೀಯ ಸಮಾಜದ ಮೇಲೆ ಶ್ರೀಮಾತೆಯವರ ಪ್ರಭಾವ' ಮತ್ತು 'ಶ್ರೀಮಾತೆಯವರ ಸಂದೇಶ'. ಈ ಲೇಖನಗಳು ಪ್ರಧಾನವಾಗಿ ಶ್ರೀಮಾತೆಯವರ ಉಪದೇಶಗಳ ಮಹತ್ವವನ್ನು ವಿವರಿಸುತ್ತವೆ. ಸಾಮಾಜಿಕ ಜೀವನದ ಮೇಲೆ ಶ್ರೀಮಾತೆ ಯವರ ಪ್ರಭಾವ ಎಂತಹದು ಎಂಬ ವಿಚಾರವಾಗಿ ಕೂಡ ಇಲ್ಲಿ ಚಿಂತಿಸಲಾಗಿದೆ.

ಶ್ರೀಮಾತೆಯವರ ಜೀವನದ ಔನ್ನತ್ಯವೆಂತಹದು, ಅವರಿಂದ ಜಗತ್ತು ಕಲಿಯಬಹುದಾದ ಮೌಲ್ಯ, ಆದರ್ಶಗಳೇನು — ಇವನ್ನು ಕುರಿತು ಸಾಕಷ್ಟು ಮಾಹಿತಿಗಳನ್ನೊಳಗೊಂಡ ಈ ಕೃತಿಯು, ಭಾರತೀಯ ನಾರಿಯ ಮಾತೃತ್ವದ ಆದರ್ಶವನ್ನು ಶ್ರೀಮಾತೆಯವರಲ್ಲಿ ಕಾಣ ಬಹುದೆಂಬ ವಿಷಯಕ್ಕೆ ಒತ್ತು ನೀಡುತ್ತದೆ. ಸುಲಲಿತವಾದ ಶೈಲಿಯಲ್ಲಿ ಅನುವಾದಗೊಂಡ ಈ ಲೇಖನಗಳು ಅಚ್ಚುಕಟ್ಟಾದ ಮುದ್ರಣ ದೊಂದಿಗೆ ಪ್ರಕಟಗೊಂಡಿದೆ. ಲೇಖನಗಳ ಆಕರವನ್ನು ನೀಡಿದ್ದರೆ ಅವುಗಳಿಗೆ ಅಧಿಕೃತತೆ ಬರುತ್ತಿತ್ತು ಅನ್ನಿಸುತ್ತದೆ.